# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 6/2017**

**ಪ್ರಾ.ಸಾ. : 17**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಚೇತನ್ ಮಟಪಾಡಿ |
| ತಂದೆಯ ಹೆಸರು | : | ಆನಂದರಾಮ ಕಲ್‌ಕುರಾ |
| ವಯಸ್ಸು | : | 37 ವರ್ಷ |
| ಕೆಲಸ | : | ವೈದ್ಯರು, ಮಕ್ಕಳ ತಜ್ಞ, ಆರ್.ಎನ್.ಎಸ್ ಆಸ್ಪತ್ರೆ, ಮುರ್ಡೇಶ್ವರ |
| ವಾಸ | : | ಮುರ್ಡೇಶ್ವರ |

**ದಿನಾಂಕಃ 13-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು ಕಳೆದ 9 ವರ್ಷಗಳಿಂದ ಮುರ್ಡೇಶ್ವರದ ಆರ್.ಎನ್.ಎಸ್ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞನಾಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದ ಚಾಸಾ-17 ಡಾಃ ಆರ್ ಸಿ ಅಂಗಡಿಯವರು ನನಗೆ ಗೊತ್ತು. ಅವರು ಸಹ 2016 ನೇ ಸಾಲಿನಲ್ಲಿ ಆರ್.ಎನ್.ಎಸ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಈಗ ಅವರಿಗೆ ಪಾರ್ಶ್ವವಾಯು ತಗುಲಿದ್ದು, ಅವರು ಈಗ ಮಾತನಾಡುವ ಹಾಗೂ ನಡೆದಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಅವರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಶಾನೆ ಪಿ-13 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಚಾಸಾ-17 ಡಾಃ ಆರ್ ಸಿ ಅಂಗಡಿಯವರು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ನಿಶಾನೆ ಪಿ-13 ರಲ್ಲಿ ನಮೂದಿಸಿರುವಂತೆ ಚಾಸಾ-17 ರವರು ಶ್ರೀಮತಿ ಸಬೀನಾ ಬಾನು ಅಂದರೆ ಈ ಪ್ರಕರಣದ ಪಿರ್ಯಾದಿಗೆ ದಿನಾಂಕ 25.04.2016 ರಂದು ರಾತ್ರಿ 2.30 ಗಂಟೆಗೆ ಚಿಕಿತ್ಸೆ ನೀಡಿರುವುದು ಕಂಡುಬಂದಿರುತ್ತದೆ ಎಂದು ನುಡಿಯುತ್ತಾರೆ. ಪಿರ್ಯಾದಿಯು ಮನೆಯ ಮಹಡಿಯಿಂದ ಕೆಳಗೆ ಬಿದ್ದು ಆದ ಗಾಯದ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆದಿರುವುದು ಕಂಡುಬಂದಿರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-13 ರಲ್ಲಿ ನಮೂದಿಸಿರುವ ಪ್ರಕಾರ 1) ಬಲಗಾಲಿನ ಕಾಲಿನ ಹಿಮ್ಮಡಿಯ ಮೇಲೆ ಊತವಿರುತ್ತದೆ, 2) ಎಡಗಾಲಿನ ಹಿಮ್ಮಡಿಯ ಮೇಲೆ ಊತವಿರುತ್ತದೆ, 3) ಬೆನ್ನಿನ

ಕೆಳಭಾಗದಲ್ಲಿ ಊತವಿರುತ್ತದೆ, 4) ಬಲಗಾಲಿನ ಹಿಮ್ಮಡಿಯ ಮೂಳೆ ಮುರಿದಿರುತ್ತದೆ, 5) ಎಡಗಾಲಿನ ಹಿಮ್ಮಡಿಯ ಮೂಳೆ ಮುರಿದಿರುತ್ತದೆ, 6) ಬೆನ್ನು ಹುರಿಯ ಒಂದು ಮೂಳೆ ಅಂದರೆ L-1 ಮೂಳೆ ಮುರಿದಿರುತ್ತದೆ. 4 ರಿಂದ 6 ನೇ ಗಾಯಗಳು ಎಕ್ಸರೇ ಮುಖಾಂತರ ಕಂಡುಬಂದಿರುತ್ತದೆ. ನಿಪಿ-13 ರ ಪ್ರಕಾರ 1 ರಿಂದ 3 ನೇ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ ಹಾಗೂ 4 ರಿಂದ 6 ನೇ ಗಾಯಗಳು ತಿರ್ವ ಸ್ವರೂಪದ ಗಾಯಗಳು ಆಗಿರುತ್ತವೆ. ಸಾಕ್ಷಿಯು ನಿಪಿ-13 ರಲ್ಲಿನ ಚಾಸಾ-17 ಡಾಃ ಆರ್ ಸಿ ಅಂಗಡಿಯವರ ಸಹಿ ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ನಿಪಿ-13 ರಲ್ಲಿ ಪಿರ್ಯಾದಿಯನ್ನು ಚಿಕಿತ್ಸೆಗಾಗಿ ಆಕೆಯ ಗಂಡ ಅಂದರೆ ಆರೋಪಿ ಕರೆದುಕೊಂಡು ಬಂದಿರುತ್ತಾನೆ ಎಂದು ನಮೂದಿಸಲಾಗಿರುತ್ತದೆ. ಸಾಮಾನ್ಯವಾಗಿ ಯಾವುದೇ ಒಂದು ವ್ಯಕ್ತಿ ಮಹಡಿಯ ಮೇಲಿಂದ ಕೆಳಗೆ ಬಿದ್ದಾಗ ನಿಪಿ-13 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಪಿರ್ಯಾದಿಗೆ ಚಿಕಿತ್ಸೆ ನೀಡಿದ ಬಗ್ಗೆ ಹಾಗೂ ಗಾಯದ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಚಾಸಾ-17 ಡಾಃ ಆರ್ ಸಿ ಅಂಗಡಿಯವರು ಪೋಲಿಸರಿಗೆ ಪತ್ರ ಒಂದನ್ನು ನೀಡಿದ್ದು ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿರುತ್ತದೆ. ಸದರಿ ನಿಪಿ-14 ರಲ್ಲಿ ಪಿರ್ಯಾದಿಯ ಸಂಬಂಧಿಕರು ಪಿರ್ಯಾದಿ ಗಾಯಕ್ಕೆ ಸಂಬಂಧಿಸಿದ ಎಕ್ಸರೇ ಗಳನ್ನು ಪಡೆದುಕೊಂಡು ಹೋಗಿರುತ್ತಾರೆ ಎಂದು ನಮೂದಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಅದೇ ರೀತಿ ಚಾಸಾ-17 ರವರು ನಿಪಿ-14 ರಲ್ಲಿ ಚಾಸಾ-1 ರವರು ಮಹಡಿಯಿಂದ ಕೆಳಗೆ ಬಿದ್ದಾಗ ನಿಪಿ-13 ರಲ್ಲಿ ನಮೂದಿಸಿರುವಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ. ನಿಪಿ-14 ರಲ್ಲಿರುವ ಚಾಸಾ-17 ಡಾಃ ಆರ್ ಸಿ ಅಂಗಡಿಯವರ ರುಜುವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಪರ ವಕೀಲರಾದ ಶ್ರೀ ಎ ಜಿ ಎನ್ ರವರಿಂದಃ**

2. ನಾನು ಮೂಳೆ ತಜ್ಞನಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾರಾದರೂ ಕೈಕಾಲು ಮೂಳೆ ಮುರಿತದ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದರೆ ನಾವು ಪ್ಲಾಸ್ಟರ್ ಮಾಡುತ್ತೇವೆ ಎಂದರೆ ಸರಿ. ಎರಡೂ ಕಾಲುಗಳಿಗೆ ಪ್ಲಾಸ್ಟರ್ ಮಾಡಿದರೆ ಪರಿಶೀಲನೆಗಾಗಿ ನಮ್ಮ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳುತ್ತೇವೆ. ಗಾಯದ ತೀರ್ವತೆಯ ಆಧಾರದ ಮೇಲೆ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳುತ್ತೇವೆ. ನಾನು ಮೂಳೆ ತಜ್ಞ ಅಲ್ಲದ ಕಾರಣ ನಿಶಾನೆ ಪಿ-13 ರಲ್ಲಿ

ನಮೂದಿಸಿರುವ ಗಾಯಗಳಿಗೆ ಎಷ್ಟು ದಿನಗಳ ಕಾಲ ದಾಖಲು ಮಾಡಿಕೊಳ್ಳಬಹುದು ಎಂದು ಹೇಳಲು ಬರುವುದಿಲ್ಲ. ನಾನು ಮೂಳೆ ತಜ್ಞ ಅಲ್ಲದ ಕಾರಣ ನಿಪಿ-13 ರಲ್ಲಿ ಇರುವ ಗಾಯಗಳನ್ನು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ನಿಪಿ-13 ಗಾಯದ ಪ್ರಮಾಣ ಪತ್ರದಲ್ಲಿ ಏನು ನಮೂದಿಸಿದಿದ್ದಾರೋ ಅದನ್ನೆ ನಾನು ಓದಿ ಹೇಳಿದ್ದೇನೆ ಎಂದು ನುಡಿದಿದ್ದಾರೆ. ನಿಪಿ-13 ರಲ್ಲಿ ಗಾಯಾಳುವಿಗೆ ಚಿಕಿತ್ಸೆ ನೀಡಿದ ಸಮಯ 2.30 pm ಎಂದು ಇರುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿಂತೆ ಎಮ್.ಎಲ್. ಸಿ ದಾಖಲಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-13 ರಲ್ಲಿ ಪಿರ್ಯಾದಿಯು ಕೆಳಗೆ ಬಿದ್ದಿದ್ದಾರೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ಮನೆಯ ಮೆಟ್ಟಿಲುಗಳ ಮೇಲೆ ಜಾರಿ ಬಿದ್ದಾಗ ನಿಪಿ-13 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ